ಮಾನ್ಯ ಕರುಣಾನಿಧಿಯವರೇನು ಟ್ರಿಬ್ಯುನಲ್ ಚೌಕಟ್ಟಿನ ಆಡಿಯಲ್ಲಿಯೇ ಮಾತನಾಡುವುದಾಗಿ ಹೇಳಿದ್ದಾರೆ, ಅದರಂತೆ ತಾವು ಹೋಗುವುದಾದರೆ ಪ್ರಯೋಜನವಾಗುವುದಿಲ್ಲ. ನಮ್ಮ ರಾಜ್ಯಕ್ಕೆ ಅದರಿಂದ ಹಿತವಾಗುವುದಿಲ್ಲ. ಮಾನ್ಯ ಕರುಣಾನಿಧಿಯವರು ಇದರ ಬಗ್ಗೆ ಸ್ಪಷ್ಟ ಮಾಡಿರುವುದರಿಂದ ತಾವು ಟ್ರಿಬ್ಯುನಲ್ ಹೊರಗಡೆ ಮಾತುಕತೆ ಮಾಡುತ್ತೇವೆ ಎಂಬ ಬಗ್ಗೆ ಸ್ಪಷ್ಟಪಡಿಸಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ರಾಜ್ಯಕ್ಕೆ ಅನಾನುಕೂಲವಾಗುತ್ತದೆ. ಆದ್ದರಿಂದ ಅವರು ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು:- ವಿಧಾನಸಭೆಯಲ್ಲಿ ನದಿ ನೀರಿನ ಸಮಸ್ಯೆಯಿಂದ ಬಹಳ ತೊಂದರೆಯಾಗಿಬಿಟ್ಟಿದೆ.

ಶ್ರೀ ಎಂ. ನಾರಾಯಣಸ್ವಾಮಿ:- ಅಧ್ಯಕ್ಷರೆ, ಇದರ ಬಗ್ಗೆ ಕಳಕಳಿ ಇರುವುದು ಅವರೊಬ್ಬರಿಗೆ ಮಾತ್ರವಲ್ಲ ನಮಗೂ ಇದೆ.

ಅಧ್ಯಕ್ಷರು:- ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ.ಎನ್. ಪುಟ್ಟಣ್ಣಯ್ಯ (ಪಾಂಡವಪುರ) :- ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್-ನವರು ಎರಡೂ ರಾಜ್ಯಗಳವರು ಮಾತುಕತೆಯ ಮೂಲಕ ಸೌಹಾರ್ದಯುತವಾಗಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ಆದೇಶ ಕೊಟ್ಟಿದ್ದಾರೆ. ತಮಿಳುನಾಡಿನ ಮುಖ್ಯಮಂತ್ರಿಯವರು ಆ ರೀತಿ ಮಾತುಕತೆಯಲ್ಲಿ ಟ್ರಿಬ್ಯುನಲ್ ಚೌಕಟ್ಟಿನಲ್ಲಿ ಮಾತನಾಡುವುದಾಗಿ ಹೇಳಿದ್ದಾರೆ. ರಾಷ್ಟ್ರೀಯ ಜಲನೀತಿ ರೂಪಿಸತಕ್ಕ ಉತ್ತಮವಾದ ಸಲಹೆಗಳನ್ನು ಕೇಂದ್ರ ಸರ್ಕಾರಕ್ಕೆ ಕೊಡಲಾಗಿದೆ. ಆ ರಾಷ್ಟ್ರೀಯ ಜಲ ನೀತಿಯಲ್ಲಿ ಸೂಚಿಸಿರುವ ವ್ಯಾಪ್ತಿಯಲ್ಲಿ ನಾವು ಮಾತನಾಡುತ್ತೇವೆಂದು ಹೇಳಿದರೆ ಸರ್ಕಾರದ ನಿಲುವು ಸ್ಪಷ್ಟವಾಗುತ್ತದೆ.

ಶ್ರೀ ಕೆ.ಎವ್. ನಾಗೇಗೌಡ:- ನಮ್ಮ ನ್ಯಾಯಧೀಶರುಗಳು ವಿಷಯವನ್ನು ನಮ್ಮ ಕೌನ್ಸಿಲ್‌ಗೆ ತಿಳಿಸಿದ್ದಾರೆ. ನಾನು ಹೆಚ್ಚು ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ರಾಜ್ಯದ ಹಿತಕ್ಕೋಸ್ಕರ ನಾವು ಈ ಕೆಲಸವನ್ನು ಮಾಡುತ್ತಿದ್ದೇವೆಯೇ ವಿನಹ ಬೇರೆ ಉದ್ದೇಶವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಧ್ಯಕ್ಷರೆ, ವಿರೋಧಪಕ್ಷದಲ್ಲಿ ನಾವುಗಳಿದ್ದು ಏನು ಮಾಡಿದಿರಿ ಎನ್ನತಕ್ಕ ಪ್ರಶ್ನೆ ಬರುತ್ತದೆ. ಆವರು ಸರ್ಕಾರದ ನಿಲುವಿನ ಬಗ್ಗೆ ಸ್ಪಷ್ಟಮಾಡಿಲ್ಲ. ರಾಷ್ಟ್ರೀಯ ಜಲನೀತಿಯನ್ನು ರೂಪಿಸದೆಯೇ, ಟ್ರಿಬ್ಯುನಲ್‌ನ ಹೊರಗಡೆ ಮಾತುಕತೆಯಾಡುತ್ತೇವೆ ಎಂಬ ಬಗ್ಗೆ ಸರ್ಕಾರ ಸ್ಪಷ್ಟ ಮಾಡದಿರುವುದರಿಂದ ಕೇಂದ್ರ ಸರ್ಕಾರವನ್ನು ಉಳಿಸಿಕೊಳ್ಳುವ ಉದ್ದೇಶದಿಂದ ನಮ್ಮ ರಾಜ್ಯದ ಹಿತವನ್ನು ಬಲಿ ಕೊಡತಕ್ಕ ಸಂಚು ಇದರಲ್ಲಿದೆ, ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸಿ ನಾವು ಸದನವನ್ನು ತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಬಿ. ಜೆ. ಪಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎನ್. ನಾಗೇಗೌಡ:- ಅಧ್ಯಕ್ಷರೆ, ಇದು ರಾಜಕೀಯ ಆರೋಪ. ಇದು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲ.